ಅನುಕೂಲತೆಯಿರಲಿಲ್ಲ. ಟ್ರೆಡ್‌ಮಿಲ್‌ನಲ್ಲಿ ನಡೆಯುವಂತೆ ಮುಂದುವರಿದೆ. ಹೀಗೆ ನಡೆಯುತ್ತಿರಬೇಕಾದರೆ ಒಮ್ಮೆಲೆ ನನ್ನ ಗಗ್ಗರಗಳು ಕಿರುಚಿ ಸದ್ದುಮಾಡತೊಡಗಿದವು. ಅಂಥ ಕರ್ಕಶ ಮೆಟಾಲಿಕ್ ಸದ್ದನ್ನು ನಾನು ಕಬ್ಬಿಣದ ಸರಳುಗಳನ್ನು ಸಿಗಿಯುವಲ್ಲಿ ಮಾತ್ರ ಕೇಳಿದ್ದು. ಏನು ಕಳಚಿಬಿದ್ದವೇ ಎಂದು ನೋಡಿದರೆ ಹಾಗೇನೂ ಆಗಿರಲಿಲ್ಲ. ನಾನು ವೇಗದ ಮಿತಿಯನ್ನು ಮೀರಿದ್ದೇನೆ ಎನ್ನುವುದನ್ನು ಅವು ಸೂಚಿಸುತ್ತಿದ್ದವು. ಜತೆ ಜತೆಗೇ ಇನ್ನೊಂದು ವಿಚಿತ್ರವೂ ನಡೆಯಿತು: ನಾನು ಒಂದಡಿ ಮುಂದಿಟ್ಟರೆ ಅಷ್ಟೇ ದೂರ ಹಿಂದಕ್ಕೆ ಬರುತ್ತಿದ್ದೆ! ಮುಂದರಿಯುವುದು ಸಾಧ್ಯವೇ ಇಲ್ಲ ಎಂಬಂತೆ. ನನಗೂ ಇದೆಲ್ಲ ಈಗ ಸಾಕುಸಾಕಾಗಿತ್ತು. ಹಿಂದಕ್ಕಾದರೂ ಮರಳೋಣ ಎಂದರೆ ಅರ್ಥದಲ್ಲಿ ಹಿಂತಿರುಗಲು ವ್ಯವಸ್ಥೆಯೇ ಇರಲಿಲ್ಲ. ಎಂದರೆ ಏನರ್ಥ? ಮುಂದಕ್ಕೆ ಹೋಗಲಾರೆ, ಹಿಂದಕ್ಕೆ ಸರಿಯಲಾರೆ! ನನ್ನ ದುರಂತದ ಅರಿವು ಸಿಡಿಲಿನಂತೆ ಬಡಿಯಿತು ನನ್ನನ್ನು. ಮೇನ್‌ಸ್ಟ್ರೀಮಿನಲ್ಲಿ ಸಾಗುವ ಕೆಲವರು ನನ್ನನ್ನು ನೋಡಿದರು, ತಮ್ಮಷ್ಟಕ್ಕೇ ನಕ್ಕರು. ಏನಾಯಿತು ಎಂದು ಕೇಳಲಿಲ್ಲ, ಅನುಕಂಪವನ್ನೂ ತೋರಲಿಲ್ಲ. ಕೊನೆಯದಾಗಿ ನಾನು ದೇವರಿಗೆ ಮೊರೆಯಿಡತೊಡಗಿದೆ: ಹೇ ಭಗವಾನ್! ಒಮ್ಮೆ ನನ್ನನ್ನು ಈ ಅವಸ್ಥೆಯಿಂದ ಬಿಡುಗಡೆಗೊಳಿಸು! ನನಗೆ ಮೇನ್‌ಸ್ಟ್ರೀಮೂ ಬೇಡ, ಸಬ್‌ಸ್ಟ್ರೀಮೂ ಬೇಡ! ನಮ್ಮೂರಿನ ಫ್ರೆಶ್‌ವಾಟರ್ ಸ್ಟ್ರೀಮ್ ಸಾಕು. ಅದೆಷ್ಟು ಪಾರದರ್ಶಕ ಎಂದರೆ ಮೀನಿನ ನೆರಳು ಕೂಡ ತಳದಲ್ಲಿ ಕಾಣಿಸುತ್ತದೆ.

## ಕೆ.ವಿ. ತಿರುಮಲೇಶ್

ಕನ್ನಡ ಸಾಹಿತ್ಯದ ನವ್ಯದ ಸಂದರ್ಭದಲ್ಲಿ ಬರೆಯಲು ಆರಂಭಿಸಿದ ಕೆ.ವಿ. ತಿರುಮಲೇಶ್ ಸುಮಾರು ಐದು ದಶಕಗಳ ಕಾಲ ಕವಿತೆ, ಕತೆ, ವಿಮರ್ಶೆ ಅನುವಾದ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ತಿರುಮಲೇಶ್‌ರ ಕವನ ಸಂಗ್ರಹಗಳು 'ಮುಖಾಮುಖಿ', 'ಅನೇಕ', 'ಅವಧ', 'ಪಾಪಿಯೂ'. ಅವರ ಮಹಾಕಾವ್ಯ 'ಅಕ್ಷಯ ಕಾವ್ಯ'ಕ್ಕೆ 2015ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಇಂಗ್ಲಿಷ್ ಅಧ್ಯಾಪಕರಾಗಿ, ಭಾಷಾವಿಜ್ಞಾನಿಯಾಗಿ ಬಹುಕಾಲ ಕನ್ನಡನಾಡಿನ ಹೊರಗಿದ್ದುಕೊಂಡೇ ಬರೆದ ತಿರುಮಲೇಶ್ 'ಮಯೂರ'ಕ್ಕೆ ನಾಲ್ಕು ದಶಕಗಳಿಂದ ಬರೆಯುತ್ತ ಬಂದಿದ್ದಾರೆ. ಪ್ರಸ್ತುತ ಹೈದರಾಬಾದಿನಲ್ಲಿ ನೆಲೆನಿಂತಿರುವ ಅವರು ಕಾಸರಗೋಡಿನ ಕಾರಡ್ಕದವರು. ಅವರ ಅನೇಕ ಕವಿತೆಗಳು ಇನ್ನಷ್ಟೇ ಸಂಕಲನ ರೂಪದಲ್ಲಿ ಬರಬೇಕಿದೆ.